ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	623
ಸದಸ್ಯರ ಹೆಸರು	:	ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	17.12.2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr>
<td>(ಅ) ನವೆಂಬರ್-2021ರ ಮಾಹೆಯಲ್ಲಿ ನಿರಂತರವಾಗಿ ಸುರಿದ ಬಾರೀ ಮಳೆಯಿಂದಾಗಿ ರೈತರು ಬೆಳೆದ ಬೆಳೆಗಳು ಸಂಪೂರ್ಣವಾಗಿ ಹಾಳಾಗಿ, ರಾಜ್ಯದ ಸಾವಿರಾರು ರೈತರು ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರಿಗೆ ಸಹಾಯವಾಗುವಂತೆ ಸರ್ಕಾರವು ಯಾವುದಾದರೂ ಪರಿಹಾರಗಳನ್ನು ಘೋಷಿಸಿದೆಯೇ; (ಘೋಷಿಸಿದ್ದಲ್ಲಿ, ಪರಿಹಾರದ ವಿವರಗಳನ್ನು ನೀಡುವುದು)</td>
<td>ನವೆಂಬರ್-2021ರ ಮಾಹೆಯಲ್ಲಿ ನಿರಂತರವಾಗಿ ಸುರಿದ ಭಾರೀ ಮಳೆಯಿಂದಾಗಿ ರೈತರು ಬೆಳೆದ ಬೆಳೆಗಳು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಬೆಳೆ ಹಾನಿಯಾದ ರೈತರಿಗೆ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರಕೃತಿ ವಿಕೋಪದಿಂದ ಶೇ.33ರಷ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಹಾನಿ ಉಂಟಾದಲ್ಲಿ ಇನ್‌ಪುಟ್ ಸಬ್ಸಿಡಿಯನ್ನು ಪ್ರತಿ ಫಲಾನುಭವಿಗಳಿಗೆ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತ ಗೊಳಿಸಿ ಈ ಕೆಳಕಂಡ ದರದಲ್ಲಿ (ಪ್ರತಿ ಹೆಕ್ಟೇರ್‌ಗೆ) ಪಾವತಿಸಲಾಗುತ್ತದೆ:
<table>
<tr><th>ಬೆಳೆ ವಿಧ</th><th>ದರ (ಹೆಕ್ಟೇರ್‌ಗೆ)</th></tr>
<tr><td>ಮಳೆಯಾಶ್ರಿತ</td><td>ರೂ.6800/-</td></tr>
<tr><td>ನೀರಾವರಿ</td><td>ರೂ.13,500/-</td></tr>
<tr><td>ಬಹುವಾರ್ಷಿಕ</td><td>ರೂ.18,000/-</td></tr>
</table>
</td>
</tr>
<tr>
<td>(ಆ) ಈ ಮಳೆಗೆ ಹಾಸನ ಜಿಲ್ಲೆಯಲ್ಲಿ ಹಾಳಾಗಿರುವ ಬೆಳೆಗಳು ಯಾವುವು; ನಷ್ಟದ ಪ್ರಮಾಣ ಮತ್ತು ನಷ್ಟದ ಮೌಲ್ಯವೆಷ್ಟು;
(ತಾಲ್ಲೂಕುವಾರು ಬೆಳೆ ವಿವರ ನೀಡುವುದು)</td>
<td>ನವೆಂಬರ್-2021ರ ಮಾಹೆಯಲ್ಲಿ ನಿರಂತರವಾಗಿ ಸುರಿದ ಹೆಚ್ಚಿನ ಮಳೆಯಿಂದಾಗಿ ಹಾಸನ ಜಿಲ್ಲೆಯಲ್ಲಿ ಭತ್ತ, ರಾಗಿ ಮುಸಿಕಿನ ಜೋಳ ಹಾಗೂ ಕಡಲೆ ಬೆಳೆಗಳು ಹಾನಿಯಾಗಿರುತ್ತದೆ. ಮುಂದುವರೆದು, ಸದರಿ ಜಿಲ್ಲೆಯಲ್ಲಿ 51463 ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು 328.48 ಕೋಟಿ ಮೌಲ್ಯದ ಬೆಳೆ ನಷ್ಟವಾಗಿರುತ್ತದೆ.
ತಾಲ್ಲೂಕುವಾರು ಬೆಳೆ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.
<table>
<tr><th colspan="7">ನವೆಂಬರ್ 2021ರಲ್ಲಿ ಹಾಸನ ಜಿಲ್ಲೆಯ ತಾಲ್ಲೂಕುವಾರು ಬೆಳೆನಷ್ಟದ ವಿವರ</th></tr>
<tr><th>ಕ್ರ.ಸಂ</th><th>ತಾಲ್ಲೂಕು</th><th>ಭತ್ತ</th><th>ಮುಸುಕಿನ ಜೋಳ</th><th>ರಾಗಿ</th><th>ಕಡಲೆ</th><th>ಒಟ್ಟು</th></tr>
<tr><td>1</td><td>ಆಲೂರು</td><td>650</td><td>4100</td><td>150</td><td>0</td><td>4900</td></tr>
<tr><td>2</td><td>ಅರಕಲಗೂಡು</td><td>445</td><td>690</td><td>1820</td><td>0</td><td>2955</td></tr>
<tr><td>3</td><td>ಅರಸೀಕೆರೆ</td><td>0</td><td>522</td><td>23210</td><td>0</td><td>23732</td></tr>
<tr><td>4</td><td>ಬೇಲೂರು</td><td>27</td><td>520</td><td>375</td><td>10</td><td>932</td></tr>
<tr><td>5</td><td>ಚನ್ನರಾಯಪಟ್ಟಣ</td><td>0</td><td>2050</td><td>13100</td><td>0</td><td>15150</td></tr>
<tr><td>6</td><td>ಹಾಸನ</td><td>30</td><td>660</td><td>1429</td><td>0</td><td>2119</td></tr>
<tr><td>7</td><td>ಹೊಳೆನರಸೀಪುರ</td><td>25</td><td>420</td><td>1150</td><td>0</td><td>1595</td></tr>
<tr><td>8</td><td>ಸಕಲೇಶಪುರ</td><td>80</td><td>0</td><td>0</td><td>0</td><td>80</td></tr>
<tr><td></td><td>ಒಟ್ಟು</td><td>1257</td><td>8962</td><td>41234</td><td>10</td><td>51463</td></tr>
<tr><td></td><td>ನಷ್ಟದ ಪ್ರಮಾಣ (ಕೋಟಿಗಳಲ್ಲಿ)</td><td>9.82</td><td>55.82</td><td>262.79</td><td>0.04</td><td>328.48</td></tr>
</table>
</td>
</tr>
</table>

(ಇ) ಇದಕ್ಕೆ ಪರಿಹಾರವಾಗಿ ಹಾಸನ ಜಿಲ್ಲೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಸಂತ್ರಸ್ಥರಿಗೆ ಇದುವರೆಗೆ ನೀಡಿದ ಪರಿಹಾರವೆಷ್ಟು; (ಪ್ರಕರಣವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

ಈ ವರೆಗೂ ಹಾಸನ ಜಿಲ್ಲೆಯಲ್ಲಿ ಬೆಳೆ ಹಾನಿಯಾದ 1,09,831 ರೈತರ ಬ್ಯಾಂಕ್ ಖಾತೆಗೆ ರೂ.5687.57 ಲಕ್ಷಗಳ ಇನ್‌ಪುಟ್ ಸಬ್ಸಿಡಿ ನೇರವಾಗಿ ಜಮೆಯಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ತಾಲ್ಲೂಕು	ರೈತರ ಸಂಖ್ಯೆ	ಮೊತ್ತ (ರೂ.ಗಳಲ್ಲಿ)
ಅರಕಲಗೂಡು	10903	38104415
ಅರಸೀಕೆರೆ	25881	121650794
ಆಲೂರು	7725	42059629
ಚನ್ನರಾಯಪಟ್ಟಣ	25961	91509647
ಬೇಲೂರು	9396	48570594
ಸಕಲೇಶಪುರ	10538	161974002
ಹಾಸನ	10049	26202479
ಹೊಳೆನರಸೀಪುರ	9378	38685517
TOTAL	**109831**	**568757075**

ಕಂಇ 604 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು